OFFICE OF THE DEPUTY DIRECTOR(RI),
RURAL INDUSTRIES DIVISION,
ZILLA PANCHAYATH, STADIUM ROAD,
A.T.I, CHITRADURGA-577501.
Phone : 08194-295979.
Email ID-ddkvichitradurga@gmail.com

ಉಪ ನಿರ್ದೇಶಕರು(ಗ್ರಾಕೈ), ರವರ ಕಛೇರಿ,
ಗ್ರಾಮಾಂತರ ಕೈಗಾರಿಕಾ ವಿಭಾಗ, ಜಿಲ್ಲಾ ಪಂಚಾಯತ್,
ಸ್ಟೇಡಿಯಂ ರೋಡ್, ಎ.ಟಿ.ಐ. ಬಿಲ್ಡಿಂಗ್,
ಚಿತ್ರದುರ್ಗ-577501.
ಫೋನ್:08194-295979

ಸಂ:ಉನಿ(ಗ್ರಾಕೈ):ಜಿಪಂಚಿ:ಗ್ರಾಕೈವಿ:ಅ.ಸೂ/2025-26

ದಿನಾಂಕ:30-07-2025

# "ಅಧಿಸೂಚನೆ"

ಉಪನಿರ್ದೇಶಕರು(ಗ್ರಾಕೈ) ಗ್ರಾಮಾಂತರ ಕೈಗಾರಿಕಾ ವಿಭಾಗ, ಜಿಲ್ಲಾ ಪಂಚಾಯತ್, ಚಿತ್ರದುರ್ಗ ರವರ ಕಛೇರಿ ವತಿಯಿಂದ 2025-26ನೇ ಸಾಲಿನ ಜಿಲ್ಲಾಉದ್ಯಮ ಕೇಂದ್ರ ಯೋಜನೆ ಹಾಗೂ ವೃತ್ತಿಪರ ಕುಶಲಕರ್ಮಿಗಳ ಯೋಜನೆಯಡಿ ಈ ಕೆಳಕಂಡಂತೆ ವೃತ್ತಿ ನಿರ್ವಹಿಸುತ್ತೀರುವ ಕುಶಲಕರ್ಮಿಗಳಿಂದ ದಿ:01-08-2025 ರಿಂದ 30-08-2025 ರವರೆಗೆ ವೆಬ್ ಸೈಟ್ chitradurga.nic.in ಮುಖಾಂತರ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

| ಕ್ರ.ಸಂ | ಕಾರ್ಯಕ್ರಮಗಳ ವಿವರ | ಉಪಕರಣಗಳು | ಗುರಿ |
|---|---|---|---|
| 01. | ಜಿಲ್ಲಾಉದ್ಯಮ ಕೇಂದ್ರ ಯೋಜನೆ 2851-00-107-0-27 | ವಿದ್ಯುತ್ ಚಾಲಿತ ಹೊಲಿಗೆ ಯಂತ್ರ | 617 |
| 02. | ವೃತ್ತಿಪರ ಕುಶಲಕರ್ಮಿ ಉಪಕರಣ ಪೂರೈಕೆ ಯೋಜನೆ 2851-00-107-0-32 | ಮರಗೆಲಸ(ಬಡಗಿತನ)<br>ಗಾರೆ/ಗೌಂಡಿ ಕೆಲಸ | 304 |

ಅರ್ಹತೆಗಳು:

1. ಜಿಲ್ಲಾ ಉದ್ಯಮ ಕೇಂದ್ರ ಯೋಜನೆಯ ಹೊಲಿಗೆ ಯಂತ್ರ ಪಡೆಯುವುದಕ್ಕಾಗಿ ಚಿತ್ರದುರ್ಗ ಜಿಲ್ಲೆಯ ಗ್ರಾಮೀಣ ಪ್ರದೇಶದಲ್ಲಿ ವಾಸವಿರುವ ಮಹಿಳಾ ಅಭ್ಯರ್ಥಿ ಮಾತ್ರ ಅರ್ಜಿ ಸಲ್ಲಿಸತಕ್ಕದ್ದು.
2. ವೃತ್ತಿಪರ ಕುಶಲಕರ್ಮಿಗಳಿಗೆ ಸುಧಾರಿತ ಉಪಕರಣಗಳ ವಿತರಣೆ ಯೋಜನೆಯಡಿ ಬಡಗಿತನ ಹಾಗೂ ಗೌಂಡಿ ಸುಧಾರಿತ ಉಪಕರಣ ಪಡೆಯಲು ಚಿತ್ರದುರ್ಗ ಜಿಲ್ಲೆಯ ಗ್ರಾಮೀಣ ಪ್ರದೇಶದಲ್ಲಿ ವಾಸವಿರುವ ಪುರುಷ ಅಭ್ಯರ್ಥಿಗಳು ಅರ್ಜಿ ಸಲ್ಲಿಸತಕ್ಕದ್ದು.
3. ಒಂದು ಕುಟುಂಬಕ್ಕೆ ಒಂದೇ ಅರ್ಜಿಯನ್ನು ಸಲ್ಲಿಸತಕ್ಕದ್ದು. ಜಿಲ್ಲಾ ಔದ್ಯಮಿಕ ಕೇಂದ್ರ ಯೋಜನೆಯಡಿ ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳು ವೃತ್ತಿ ನಿರತ ಕುಶಲಕರ್ಮಿಗಳಿಗೆ ಸುಧಾರಿತ ಉಪಕರಣಗಳ ವಿತರಣೆ ಯೋಜನೆಯಡಿ ಉಪಕರಣಕ್ಕೆ ಅರ್ಜಿ ಸಲ್ಲಿಸಲು ಅವಕಾಶವಿರುವುದಿಲ್ಲ. ಅರ್ಜಿ ಸಲ್ಲಿಸಿದ್ದಲ್ಲಿ ಎರಡು ಕಡೆ ಅರ್ಜಿ ತಿರಸ್ಕೃತಗೊಳ್ಳುತ್ತದೆ.
4. ವಿದ್ಯುತ್ ಚಾಲಿತ ಹೊಲಿಗೆ ಯಂತ್ರ, ಮರಗೆಲಸ ಮತ್ತು ಗಾರೆ/ಗೌಂಡಿ ಉಪಕರಣಗಳನ್ನು ಪಡೆಯುವುದಕ್ಕಾಗಿ ಅರ್ಜಿ ಸಲ್ಲಿಸಲು ಅಭ್ಯರ್ಥಿಯ ವಯಸ್ಸು 18 ವರ್ಷ ಹಾಗೂ ಗರಿಷ್ಟ 55 ವರ್ಷಗಳು ಇರತಕ್ಕದ್ದು.
5. ಸರ್ಕಾರಿ ನೌಕರರು ಅಥವಾ ಅವರ ಅವಲಂಭಿತರು ಅರ್ಜಿ ಸಲ್ಲಿಸಲು ಅರ್ಹರಿರುವುದಿಲ್ಲ.
6. ಆನ್ ಲೈನ್ ನಲ್ಲಿ chitradurga.nic.in ವೆಬ್ ಸೈಟ್ ಮುಖಾಂತರ ಅವಶ್ಯ ಮಾಹಿತಿ ಭರ್ತಿ ಮಾಡಿ ಮತ್ತು ಸಂಬಂಧಿಸಿದ ದಾಖಲೆಗಳ ಸ್ವಯಂ ದೃಢೀಕೃತ ಪ್ರತಿಯನ್ನು ಅಪ್ಲೋಡ್ ಮಾಡುವ ಮೂಲಕ ನಿಗದಿತ ದಿನಾಂಕದೊಳಗಾಗಿ ಅರ್ಜಿ ಸಲ್ಲಿಸುವುದು.

   <u>ಅರ್ಜಿಯೊಂದಿಗೆ ಈ ಕೆಳಕಂಡ ದಾಖಲಾತಿಗಳನ್ನು ನೀಡುವುದು.</u>

   1. ಫೋಟೋ (ಪಾಸ್ ಪೋರ್ಟ್ ಸೈಜ್)
   2. ವಿದ್ಯಾರ್ಹತೆ ಬಗ್ಗೆ ಪ್ರಮಾಣ ಪತ್ರ.
   3. ಆಧಾರ್ ಕಾರ್ಡ್/ಮತದಾರರ ಗುರುತಿನ ಚೀಟಿ.
   4. ಜನ್ಮದಿನಾಂಕ ನಮೂದಿಸಿದ ದಾಖಲೆ .
   5. ತರಬೇತಿ ಪಡೆದಿದ್ದರೆ ತರಬೇತಿ ಪ್ರಮಾಣ ಪತ್ರ.
   6. ಜಾತಿ ಪ್ರಮಾಣ ಪತ್ರ.
   7. ಪಡಿತರ ಚೀಟಿ.
   8. ಆಯಾ ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿಯವರಿಂದ ವೃತ್ತಿ ಮಾಡುತ್ತಿರುವ ಬಗ್ಗೆ ಗ್ರಾಮ ಪಂಚಾಯತ್ ಲೆಟರ್ ಹೆಡ್ ನಲ್ಲಿ ನಿಗದಿತ ನಮೂನೆಯಲ್ಲಿ ಕುಶಲಕರ್ಮಿ ದೃಢೀಕರಣ ಪತ್ರ ಪಡೆದ ನಂತರವೇ ಆನ್ ಲೈನ್ ನಲ್ಲಿ ಅರ್ಜಿ ಸಲ್ಲಿಸಲು / ಅಪ್ ಲೋಡ್ ಮಾಡಲು ಕ್ರಮವಹಿಸಲು ಕೋರಿದೆ.
   9. ಅಂಗವಿಕಲ / ಮಾಜಿ ಸೈನಿಕ ಪ್ರಮಾಣ ಪತ್ರ.

7. ತಾಲ್ಲೂಕುವಾರು ಹಾಗೂ ಪ್ರವರ್ಗವಾರು ಗುರಿಯನ್ನು ನಿಗದಿಪಡಿಸಿಕೊಳ್ಳಲಾಗುವುದು.
8. **ಆಯ್ಕೆ ಪ್ರಕ್ರಿಯೆ: ನಿಗದಿಪಡಿಸಿರುವ ಗುರಿಗಿಂತ ಹೆಚ್ಚಿನ ಅರ್ಜಿಗಳು ಸ್ವೀಕೃತವಾಗಿದ್ದಲ್ಲಿ ಲಾಟರಿ ಮೂಲಕ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುವುದು.**

ಹೆಚ್ಚಿನ ಮಾಹಿತಿಗಾಗಿ ಉಪನಿರ್ದೇಶಕರು(ಗ್ರಾಕೈ), ಗ್ರಾಮಾಂತರ ಕೈಗಾರಿಕಾ ವಿಭಾಗ, ಜಿಲ್ಲಾ ಪಂಚಾಯತ್, ಚಿತ್ರದುರ್ಗ ರವರ ಕಛೇರಿಯನ್ನು ಸಂಪರ್ಕಿಸಬಹುದಾಗಿದೆ. ದೂರವಾಣಿ : 08194-295979

ಉಪನಿರ್ದೇಶಕರು(ಗ್ರಾಕೈ)
ಗ್ರಾಮಾಂತರ ಕೈಗಾರಿಕಾ ವಿಭಾಗ,
ಜಿಲ್ಲಾ ಪಂಚಾಯತ್, ಚಿತ್ರದುರ್ಗ

# ಗ್ರಾಮ ಪಂಚಾಯತ್ ಕುಶಲಕರ್ಮಿ ದೃಢೀಕರಣ ಪತ್ರ

ಈ ಮೂಲಕ ______________________ ಗ್ರಾಮ ಪಂಚಾಯತ್ ಕಾರ್ಯಾಲಯದಿಂದ ಬರೆದುಕೊಡುವ ಪ್ರಮಾಣ ಏನೆಂದರೆ, ಶ್ರೀ/ಶ್ರೀಮತಿ/ಕುಮಾರಿ ______________________ ಇವರು ಚಿತ್ರದುರ್ಗ ಜಿಲ್ಲೆಯ ______________ ತಾಲ್ಲೂಕಿನ ______________ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಬರುವ __________________ ಗ್ರಾಮದ ಖಾಯಂ ನಿವಾಸಿಯಾಗಿದ್ದು, ಇವರ

ಆಧಾರ್ ಸಂಖ್ಯೆ: | | | | | | | | | | | | | ಆಗಿರುತ್ತದೆ.

ಇವರು ______________________ ವೃತ್ತಿಯ ಕುಶಲಕರ್ಮಿಯಾಗಿದ್ದು, ಸದರಿ ವೃತ್ತಿಯಲ್ಲಿ ತೊಡಗಿಕೊಂಡಿರುತ್ತಾರೆ. ಸದರಿಯವರು ಈ ಮೊದಲು ಸರಕಾರದ ಯಾವುದೇ ಯೋಜನೆಯಡಿಯಲ್ಲಿ ಉಚಿತ ಉಪಕರಣಗಳನ್ನು ಪಡೆದಿರುವುದಿಲ್ಲ. ಸದರಿಯವರಿಗೆ __________________ ವೃತ್ತಿಯ ಉಪಕರಣಗಳನ್ನು ನೀಡಲು ಈ ಮೂಲಕ ಅರ್ಹ ಕುಶಲಕರ್ಮಿ ಎಂದು ಶಿಫಾರಸ್ಸು ಮಾಡಲಾಗಿದೆ.

ಸ್ಥಳ:
ದಿನಾಂಕ:

ಪಂಚಾಯತ್ ಅಭಿವೃದ್ದಿ ಅಧಿಕಾರಿ
ಗ್ರಾಮ ಪಂಚಾಯತ್__________
ತಾ:____________ ಜಿ:ಚಿತ್ರದುರ್ಗ

# "ಸಹಿ ದೃಢೀಕರಣ ಪ್ರಮಾಣ ಪತ್ರ"

1. ______________________ (                    )

2. ______________________ (                    )

3. ______________________ (                    )

**ಮೇಲೆ ಸಹಿ ಮಾಡಿದ ಶ್ರೀ/ಶ್ರೀಮತಿ/ಕುಮಾರಿ ______________________**
**ಇವರ ಮಾದರಿ ಸಹಿ ಈ ಮೂಲಕ ದೃಢೀಕರಿಸಿದೆ.**

ಪಂಚಾಯತ್ ಅಭಿವೃದ್ದಿ ಅಧಿಕಾರಿ
ಗ್ರಾಮ ಪಂಚಾಯತ್__________
ತಾ:____________ ಜಿ: ಚಿತ್ರದುರ್ಗ

**ವಿಶೇಷ ಸೂಚನೆ:-ಗ್ರಾಮ ಪಂಚಾಯತ್ ಲೆಟರ್‌ಹೆಡ್‌ನಲ್ಲಿ ಪಂಚಾಯತಿ ಅಭಿವೃದ್ದಿ ಅಧಿಕಾರಿಯವರ ಸಹಿ ಹಾಗೂ ಸೀಲ್‌ನೊಂದಿಗೆ ದೃಢೀಕರಿಸಿದ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಅಪ್‌ಲೋಡ್ ಮಾಡುವುದು.**